ವಿಷಯ : ಟೂರಿಸ್ಟ್ ಟ್ಯಾಕ್ಸಿಗಳಿಗೆ ಲೈಫ್ ಟೈಮ್ ಟ್ಯಾಕ್ಸ್ ಹಾಕುವ ಬಗ್ಗೆ.

ಶ್ರೀ ಎನ್.ಎ. ಹ್ಯಾರೀಸ್ (ಶಾಂತಿನಗರ) : ಮಾನ್ಯ ಅಧ್ಯಕ್ಷರೆ, ಟ್ಯಾಕ್ಸಿ ವಾಹನಗಳಿಗೆ ಜೀವಿತಾವಧಿ ತೆರಿಗೆ ವಿಧಿಸಿರುವ ಬಗ್ಗೆ ಕೇಳುತ್ತಿದ್ದೇನೆ. ನಮ್ಮ ಟೂರಿಸ್ಟ್ ಟ್ಯಾಕ್ಸಿಗಳಿಗೆ ಲೈಫ್ ಟೈಮ್ ಟ್ಯಾಕ್ಸ್ ಹಾಕುವಂಥದ್ದು .... ಅಧ್ಯಕ್ಷರೆ, ಯಾರೂ ಕೇಳುತ್ತಿಲ್ಲ.

ಅಧ್ಯಕ್ಷರು : ಮಾನ್ಯ ಸಾರಿಗೆ ಸಚಿವರು ಇಲ್ಲ, ಅವರು ಬರಲಿ.

7. ವಿಷಯ : ದಿನಗೂಲಿ ನೌಕರರನ್ನು ಖಾಯಂಗೊಳಿಸುವ ಬಗ್ಗೆ.

ಶ್ರೀ ಯು.ಟಿ. ಖಾದರ್ (ಮಂಗಳೂರು) : ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಬೇರೆ ಬೇರೆ ಇಲಾಖೆಗಳಲ್ಲಿ ಸುಮಾರು 14000 ದಿನಗೂಲಿ ನೌಕರರು ಇವತ್ತು ಯಾವುದೇ ಸೇವಾ ಭದ್ರತೆ ಇಲ್ಲದೆ ಸರಿಯಾದ ಸಂಬಳ ಇಲ್ಲದೆ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಹಿಂದೆ ಇದ್ದ ಸರ್ಕಾರ ಕೂಡ ಇದರ ಬಗ್ಗೆ ಒಂದು ಉಪ ಸಮಿತಿಯನ್ನು ರಚಿಸಿದೆ. ಆದರೆ ಇಲ್ಲಿಯವರೆಗೂ ಕೂಡ ಸರಿಯಾದ ತೀರ್ಮಾನ ಮಾಡಿಲ್ಲ.ಈ 14000 ದಿನಗೂಲಿ ನೌಕರರು ಸಂಬಳ ಇಲ್ಲದೆ ಕೆಲಸ ಮಾಡಿದರೂ ಕೂಡ ಸರಿಯಾದ ವೇತನ ಹಾಗೂ ಸೇವಾ ಭದ್ರತೆ ಇಲ್ಲದೆ ಆತಂತ್ರ ಸ್ಥಿತಿಯಲ್ಲಿದ್ದಾರೆ. ಆದ ಕಾರಣ ಸರ್ಕಾರ ಅವರ ಬಗ್ಗೆ ಇರುವ ವರದಿಗೆ ಮಾನ್ಯತೆ ಕೊಟ್ಟು ಅವರನ್ನು ಖಾಯಂಗೊಳಿಸುವುದಕ್ಕೆ ಅದಷ್ಟು ಬೇಗೆ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ 23–02–1993ನೇ ಇಸವಿಯಲ್ಲಿ ಸರ್ವೋಚ್ಚ ನ್ಯಾಯಾಲಯ ಕೊಟ್ಟ ತೀರ್ಪಿನ ಹಿನ್ನಲೆಯಲ್ಲಿ ರಾಜ್ಯ ಸರ್ಕಾರದಿಂದ ಒಂದು ಆದೇಶ ಹೊರಡಿಸಿತು. ಆಗ ವಿವಿಧ ಇಲಾಖೆಗಳಲ್ಲಿ 1.07.1974ಕ್ಕಿಂತ ಮುಂಚೆ ಯಾರ್ಯಾರು ಕೆಲಸಕ್ಕೆ ಸೇರಿದ್ದರು ಅವರೆಲ್ಲರನ್ನೂ ಸಕ್ರಮಗೊಳಿಸಿದ್ದೇವೆ. ಆದರೆ ಈ ಜಡ್ಜಮೆಂಟ್‌ನಲ್ಲಿ ಏನಿದೆ ಎಂದು ನಮಗೆಲ್ಲಾ ಗೊತ್ತಿದೆ. ನಾಲ್ಕು

ಕಂಡಿಷನ್‌ಗಳನ್ನು ಹಾಕಿದ್ದಾರೆ. ಆ ನಾಲ್ಕು ಕಂಡಿಷನ್ ಒಳಗೆ ಬರುವುದಿದ್ದರೆ ಅವರನ್ನು ಮಾತ್ರ ನಾವು ರೆಗ್ಯುಲರೈಸೇಷನ್ ಮಾಡಬಹುದು ಎಂದು ಸೂಚನೆ ಇದೆ. (ಉಮಾ ದೇವಿ ಅವರ ಪ್ರಕರಣ) ಈ ಹಿನ್ನಲೆಯಲ್ಲಿ ಸುಮಾರು 17,000 ಜನ ದಿನಗೂಲಿ ನೌಕರರು ಏನಿದ್ದಾರೆ ಅವರಿಗೆ ನ್ಯಾಯ ಒದಗಿಸಿ ಕೊಡಬೇಕು. ಅವರಿಗೆ ಹೇಗಾದರೂ ಮಾಡಿ ಅವರ ಹುದ್ದೆಗಳನ್ನು ರೆಗ್ಯುಲರೈಸ್ ಮಾಡಬೇಕೆಂಬ ಉದ್ದೇಶದಿಂದ ನಮ್ಮ ಸರ್ಕಾರ ಹಿಂದೆ ಲೋಕೋಪಯೋಗಿ ಸಚಿವರಾದ ಶ್ರೀ ಸಿ.ಎಂ. ಉದಾಸಿಯವರ ಅಧ್ಯಕ್ಷತೆಯಲ್ಲಿ ಒಂದು ಸಚಿವ ಸಂಪುಟದ ಉಪ ಸಮಿತಿ ರಚಿಸಿತ್ತು. ಆ ಸಚಿವ ಸಂಪುಟದ ಉಪ ಸಮಿತಿ ಇದಕ್ಕೆ ಅನುಕೂಲ ಆಗುವ ರೀತಿಯಲ್ಲಿ ಒಂದು ವರದಿಯನ್ನು ಕೊಟ್ಟು ಶಿಫಾರಸ್ಸು ಮಾಡಿದ್ದೇವೆ. ಆ ಶಿಫಾರಸ್ಸಿನ ಬಗ್ಗೆ ಸರ್ಕಾರ ಹಣಕಾಸು ಇಲಾಖೆ ಜೊತೆ ಚರ್ಚೆ ಮಾಡುತ್ತಿದೆ. 17,000 ಜನ ದಿನಗೂಲಿ ನೌಕರರು ಏನಿದ್ದಾರೆ. ಅವರಿಗೆ ಈ ನಾಲ್ಕು ಕಂಡಿಷನ್ ಒಳಗಡೆ ಯಾವ ರೀತಿ ಅವರನ್ನು ರೆಗ್ಯುಲರೈಸ್ ಮಾಡಬಹುದು. ಯಾವ ರೀತಿ ಅವರಿಗೆ ನ್ಯಾಯ ದೊರಕಿಸಿ ಕೊಡಬಹುದು ಎಂದು ಸರ್ಕಾರ ಗಂಭೀರವಾಗಿ ಪರಿಶೀಲಿಸುತ್ತಿದೆ.

8. ವಿಷಯ : ಹಿಪ್ಪರಗಿ ಬ್ಯಾರೇಜ್‌ನ ಎತ್ತರವನ್ನು ಹೆಚ್ಚಿಸುವ ಕುರಿತು.

ಶ್ರೀ ಶ್ರೀಕಾಂತ್ ಕುಲಕರ್ಣಿ : ಮಾನ್ಯ ಅಧ್ಯಕ್ಷರೆ, ಕೃಷ್ಣ ನದಿ ಬೇಸಿಗೆಯಲ್ಲಿ ಬರಿದಾಗಿ ಹಿಪ್ಪರಗಿಯಿಂದ ಗಲಗಲಿಯವರೆಗೆ ಕುಡಿಯುವ ನೀರು ಸಿಗುವುದಿಲ್ಲ. ರೈತರು ಅಲ್ಲಿ ಬೆಳೆದ ಬೆಳೆಗಳೂ ಕೂಡ ಹಾನಿಯಾಗುವ ಸಂಭವವಿರುವುದರಿಂದ ಪ್ರತಿ ವರ್ಷ ಈ ರೀತಿ ಪರಿಸ್ಥಿತಿ ಬಂದಾಗ ಅದನ್ನು ಎದುರಿಸುವುದಕ್ಕೆ ಸರ್ಕಾರಕ್ಕೆ ಕೂಡ ಸಾಧ್ಯವಾಗದೆ ಇರುವ ಪರಿಸ್ಥಿತಿ ಬರುತ್ತದೆ. ಮಹಾರಾಷ್ಟ್ರದ ಕೊಯ್ನಾದಿಂದ ನೀರು ಬಿಡಿಸುವ ಪ್ರಯತ್ನ ಆದಾಗ ಒಂದೊಂದು TMCಗೆ ನಾವು 3 ಕೋಟಿ ರೂಪಾಯಿಗಳನ್ನು ಕಟ್ಟುವ ಸಂದರ್ಭ ಬರುತ್ತದೆ. ಆದ್ದರಿಂದ ಈ ಸಮಸ್ಯೆಗೆ ಒಂದು ಶಾಶ್ವತವಾದ ಪರಿಹಾರ ಬೇಕು ಎನ್ನುವ ಹಿನ್ನಲೆಯಲ್ಲಿ ನಿನ್ನೆ ಬರೆದ ಬಗ್ಗೆ ಚರ್ಚೆ ಮಾಡುವ ಸಂದರ್ಭದಲ್ಲಿ ಕೂಡ ನಾನು ಪ್ರಸ್ತಾಪ ಮಾಡಿದೆ. ಬೀಳಗಿ